# ಸಮನ್ವಯ ಭಾವ



✹ ಭಗವಂತ ಸಕಲ ಭೂತಗಳಲ್ಲಿಯೂ ಇರುವುದರಿಂದ ಎಲ್ಲರನ್ನೂ ಪ್ರೀತಿಸಲೇಬೇಕು. ಆದರೂ ದುಷ್ಟರಿಗೆ ಸ್ವಲ್ಪ ದೂರದಿಂದಲೇ ನಮಸ್ಕಾರ ಹಾಕಿಬಿಡಬೇಕು. ಏನು! ಚೈತನ್ಯದೇವನೆ? ಆತನೂ ಕೂಡ ಅನ್ಯ ಸಂಪ್ರದಾಯದವರೊಡನೆ ವ್ಯವಹರಿಸುವಾಗ ತನ್ನ ಆಂತರಿಕ ಭಾವನೆಗಳನ್ನು ಒಂದು ನಿರೋಧದಲ್ಲಿ ಇಟ್ಟುಕೊಳ್ಳುತ್ತಿದ್ದ.

✹ ನನ್ನ ಧರ್ಮವೆ ಸರಿ, ಉಳಿದವರದೆಲ್ಲ ತಪ್ಪು, ಎನ್ನುವ ಭಾವ ಒಳ್ಳೆಯದಲ್ಲ. ನಾನು ನೋಡುತ್ತಿದ್ದೇನೆ ಆತನೆ ಈ ಎಲ್ಲ ಆಗಿರುವುದನ್ನು — ಮನುಷ್ಯ, ಪ್ರತಿಮೆ, ಸಾಲಿಗ್ರಾಮ, ಎಲ್ಲದರ ಆಂತರ್ಯದಲ್ಲಿಯೂ ಆತನೊಬ್ಬನನ್ನೆ ನೋಡುತ್ತಿದ್ದೇನೆ; ಆತನೊಬ್ಬನನ್ನು ವಿನಾ ಎರಡನೆಯದನ್ನು ಕಾಣುತ್ತಿಲ್ಲ.

✹ ಭಗವಂತ ಒಳಗೂ ಹೊರಗೂ ಇದ್ದಾನೆ. ಅಂತರ್ಯದಲ್ಲಿ ಆತನೆ ಇದ್ದಾನೆ. ಅದಕ್ಕಾಗಿಯೆ ವೇದ ಹೇಳುತ್ತದೆ, 'ತತ್ತ್ವಮಸಿ' — ಆತನೇ ನೀನು ಎಂದು. ಹೊರಗೂ ಆತನೆ. ಮಾಯೆಯಿಂದ ನಾನಾ ರೂಪುಗಳಾಗಿ ಕಾಣಿಸಿಕೊಳ್ಳುತ್ತಿದ್ದಾನೆ. ಆದರೆ ವಸ್ತುತಃ ಆತನೆ ಇದ್ದಾನೆ. ಅದಕ್ಕಾಗಿಯೆ ಆತನ ಎಲ್ಲಾ ನಾಮರೂಪಗಳನ್ನು ವರ್ಣಿಸುವುದಕ್ಕೆ ಮುನ್ನ ಹೇಳಬೇಕು, 'ಓಂ ತತ್ ಸತ್' ಎಂದು.

✹ ದರ್ಶನ ಮಾಡಿದರೆ ಒಂದು ವಿಧ, ಶಾಸ್ತ್ರ ಓದಿದರೆ ಇನ್ನೊಂದು ವಿಧ. ಶಾಸ್ತ್ರದಿಂದ ಸೂಚನೆ ಮಾತ್ರ ದೊರೆಯುತ್ತದೆ. ಅದಕ್ಕಾಗಿಯೆ ಅನೇಕ ಶಾಸ್ತ್ರಗಳನ್ನು ಓದುವುದರಿಂದ ಯಾವ ಪ್ರಯೋಜನವೂ ದೊರಕದು. ಅದಕ್ಕೆ ಬದಲು ನಿರ್ಜನಪ್ರದೇಶದಲ್ಲಿ ಆತನನ್ನು ಕರೆಯುವುದು ಮೇಲು.

✹ ಗೀತೆಯನ್ನು ಪೂರ್ಣವಾಗಿ ಓದದೆ ಇದ್ದರೂ ಸರಿಯೆ, ಹತ್ತು ಸಲ 'ಗೀತಾ' 'ಗೀತಾ' ಎಂದು ಉಚ್ಚರಿಸಿದರೆ ಅದು ಏನಾಗುವುದೊ ಅದೇ ಗೀತೆಯ ಸಾರ. ಅಂದರೆ 'ತ್ಯಾಗಿ' ಎಂದು. 'ಹೇ ಜೀವ, ಎಲ್ಲವನ್ನೂ ತ್ಯಜಿಸಿ ಭಗವಂತನನ್ನು ಆರಾಧಿಸು', ಎಂದು. ಇದೇ ಗೀತೆಯ ಸಾರ ವಿಷಯ.

✹ ಆತನಿಗೆ ಹಲವಾರು ವಿಧದಿಂದ ಸೇವೆ ಸಲ್ಲಿಸಬಹುದು. ಪ್ರೇಮಿಕ ಭಕ್ತ ಆತನೊಡನೆ ವಿವಿಧ ರೂಪದಲ್ಲಿ ಆನಂದಪಡುತ್ತಾನೆ. ಕೆಲವು ವೇಳೆ ಯೋಚಿಸುತ್ತಾನೆ, 'ನೀನು ತಾವರೆ, ನಾನು ದುಂಬಿ' ಎಂದು. ಇನ್ನು ಕೆಲವು ವೇಳೆ ಭಾವಿಸುತ್ತಾನೆ, 'ನೀನು ಸಚ್ಚಿದಾನಂದ ಸಾಗರ, ನಾನು ಅದರಲ್ಲಿ ಮೀನು' ಎಂದು. ಮತ್ತೆ ಕೆಲವು ವೇಳೆ ಯೋಚಿಸುತ್ತಾನೆ, 'ನಾನು ನಿನ್ನ ನರ್ತಕಿ' ಎಂದು. ಆತನ ಮುಂದೆ ಹಾಡುತ್ತಾನೆ, ನರ್ತಿಸುತ್ತಾನೆ. ಕೆಲವು ವೇಳೆ ಸಖೀಭಾವ-ದಾಸೀ ಭಾವ. ಕೆಲವು ವೇಳೆ ವಾತ್ಸಲ್ಯಭಾವ-ಯಶೋದೆಯಂತೆ. ಕೆಲವು ವೇಳೆ ಸತೀಭಾವ - ಮಧುರ ಭಾವ - ಗೋಪಿಯರಂತೆ.

✹ ಬಲರಾಮ ಕೆಲವು ವೇಳೆ ಸಖನ ಭಾವದಲ್ಲಿ ಇರುತ್ತಿದ್ದ. ಕೆಲವು ವೇಳೆ ಯೋಚಿಸುತ್ತಿದ್ದ, 'ನಾನು ಕೃಷ್ಣನ ಛತ್ರಿ ಮತ್ತು ಪೀಠ ಆಗಿದ್ದೇನೆ' ಎಂದು. ವಿವಿಧ ರೀತಿಯಿಂದ ಆತನ ಸೇವೆ ಮಾಡುತ್ತಿದ್ದ.

✹ ಯಾವುದನ್ನೇ ಆದರೂ ಆತನಿಗೆ ಒಂದು ಪಾಲಿನಷ್ಟು ಅರ್ಪಿಸಿದರೆ ಅದರ ಸಹಸ್ರದಷ್ಟು ಪಾಲು ಹಿಂದಿರುಗಿ ಬರುತ್ತದೆ. ಅದಕ್ಕಾಗಿಯೆ ದಾನ ಧರ್ಮಾದಿಗಳನ್ನು ಮಾಡಿದ ನಂತರ ಒಂದು ಬೊಗಸೆ ನೀರನ್ನು ತೆಗೆದು ಕೊಂಡು, 'ಶ್ರೀಕೃಷ್ಣಾರ್ಪಣಮಸ್ತು — ಶ್ರೀಕೃಷ್ಣನಿಗೆ ಫಲವನ್ನು ಅರ್ಪಿಸಿದ್ದೇನೆ' ಎಂದು ಹೇಳುವುದು. ಯುಧಿಷ್ಠಿರ ತನ್ನ ಸಕಲ ಪಾಪಗಳನ್ನು ಶ್ರಿಕೃಷ್ಣನಿಗೆ ಅರ್ಪಿಸಲು ಸಿದ್ಧನಾಗುತ್ತಿದ್ದಾಗ ಒಬ್ಬ (ಭೀಮ) 'ಅಂಥ ಕಾರ್ಯವನ್ನು ಎಂದಿಗೂ ಮಾಡಬೇಡ — ಶ್ರೀಕೃಷ್ಣನಿಗೆ ನೀನು ಏನು ಅರ್ಪಿಸುವಿಯೊ, ಅದು ಒಂದು ಸಹಸ್ರಮಡಿಯಾಗಿ ನಿನಗೆ ಹಿಂದಿರುಗಿ ಬರುತ್ತದೆ' ಎಂದು ಎಚ್ಚರಿಕೆ ಕೊಟ್ಟ.

✹ ನೀರು ಮತ್ತು ಅದರ ತೋಯಿಸುವ ಶಕ್ತಿಯಂತೆ ಚಿಚ್ಛಕ್ತಿಗೂ ವೇದಾಂತದ ಬ್ರಹ್ಮನಿಗೂ ಅಭೇದ, ನೀರಿನ ತೋಯಿಸುವ ಶಕ್ತಿಯನ್ನು ಭಾವಿಸಿದರೆ ನೀರನ್ನು ಭಾವಿಸಬೇಕಾಗುತ್ತದೆ; ನೀರನ್ನು ಭಾವಿಸಿದರೆ ನೀರಿನ ತೋಯಿಸುವ ಶಕ್ತಿಯ ಭಾವನೆ ಬಂದೇ ಬಿಡುತ್ತದೆ. ಹಾವು ಮತ್ತು ಅದರ ವಕ್ರಗತಿ; ವಕ್ರಗತಿಯನ್ನು ಭಾವಿಸಿದರೆ ಸರ್ಪವನ್ನು ಭಾವಿಸಲೇಬೇಕಾಗುತ್ತದೆ. ಬ್ರಹ್ಮವೆಂದು ಯಾವಾಗ ಹೇಳುತ್ತೇನೆ? ಆತ ನಿಷ್ಕ್ರಿಯನಾಗಿರುವಾಗ, ಕಾರ್ಯದಿಂದ ನಿರ್ಲಿಪ್ತನಾಗಿರುವಾಗ. ಹಾವಿನಲ್ಲಿ ವಿಷವಿದೆ. ಆದರೆ ಅದರಿಂದ ಹಾವಿಗೆ ಏನೂ ಆಗುವುದಿಲ್ಲ. ಅದು ಯಾರನ್ನು ಕಡಿಯುತ್ತದೆಯೊ ಅವರಿಗೆ ಅದು ವಿಷವಾಗಿ ಪರಿಣಮಿಸುತ್ತದೆ. ಬ್ರಹ್ಮ ಅದರಿಂದ ನಿರ್ಲಿಪ್ತ.

✹ ಒಂದರಲ್ಲಿ ದೃಢವಿಶ್ವಾಸವುಳ್ಳವರಾಗಿರಿ — ಸಾಕಾರದಲ್ಲಿ ಇಲ್ಲದಿದ್ದರೆ ನಿರಾಕಾರದಲ್ಲಿ, ಆಗ ಮಾತ್ರ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೆ; ಇಲ್ಲದೆ ಇದ್ದರೆ ದೊರೆಯದು. ದೃಢತೆಯೊಂದಿದ್ದರೆ ಸಾಕಾರವಾದಿಗೂ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೆ, ನಿರಾಕಾರವಾದಿಗೂ ದೊರೆಯುತ್ತದೆ. ಕಜ್ಜಾಯವನ್ನು ನೆಟ್ಟನೆಟ್ಟಗೆ ಕಡಿದು ತಿನ್ನಿ, ಹೇಗೆ ತಿಂದರೂ ಸಿಹಿಯಾಗಿ ಇರುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ